ಆಲೋಚಿಸಬಹುದು. 'ಕವಿತೆ ಬರೆಯುವುದೆಂದರೆ ಹೆರುವ ಹಾಗೆ; ಅಷ್ಟೇ ತ್ರಾಸದಾಯಕ' ಅಂತ ಕವಿ ಅಡಿಗರು ಹೇಳಿದ್ದಾರೆ. 'ನನ್ನ ಕವಿತೆಗೆ ನಾನು ಸೂಲಗಿತ್ತಿ ಮಾತ್ರ. ನಿಜವಾದ ಕವಿತೆ ತನ್ನಷ್ಟಕ್ಕೆ ತಾನೇ ದೇಹವನ್ನು ಧರಿಸುತ್ತದೆ' ಅಂತ ಬೇಂದ್ರೆಯವರು ಹೇಳಿದ್ದಾರೆ. ಇವೆಲ್ಲವು ಸೃಜನಶೀಲ ಸೃಷ್ಟಿಯ ಹೊಳಹಿನ ಎಳೆಯನ್ನು ಪರ್ಯಾಯವಾಗಿ 'ಭ್ರೂಣ' ಅಂತಲೇ ಅನ್ನುತ್ತವೆಯಲ್ಲವೇ?

ಯಾವುದೊ ಕ್ಷಣದಲ್ಲಿ ಧಿಗ್ಗನೆ ಉದ್ಭವಿಸುವ ಹೊಸ ವಸ್ತುವಿನ ಬೀಜಗಳು ಅದೆಷ್ಟು ರೋಮಾಂಚನಕಾರಿಯೂ, ಅದ್ಭುತವೂ ಆಗಿರುತ್ತವೆಂದರೆ!!... ನೋಡಿ, ನಿಮಗೆ ಹೇಳಬೇಕು ಅಂದರೆ ಅಂತಹವುಗಳ ಒಂದು ಸಾಲೂ ಸಹ, ಅಲ್ಲಲ್ಲ... ಒಂದೇ ಒಂದು ಪದ ಕೂಡಾ ನೆನಪಿಗೆ ಬರುತ್ತಿಲ್ಲ. ಒಂದು ಶಬ್ದ ನೆನಪಿದ್ದರೆ ನಾ...ನು ಬಿಡುತ್ತಿದ್ದೆನಾ... ಕಥೆ ಮಾಡಿ ಬಿಸಾಕಿ ಬಿಡುತ್ತಿದ್ದೆ. ಹೀಗೆ ನನ್ನ ನೆನಪಿನಿಂದ ಹಾರಿಹೋದ ಅಸಂಖ್ಯ ಭ್ರೂಣಗಳ ಬಗ್ಗೆ ನನಗೆ ಭಯಂಕರ ದುಃಖವಿದೆ. ಕರುಳ ಬಳ್ಳಿಯನ್ನು ಕಳೆದುಕೊಂಡಷ್ಟೇ ನೋವಿನಿಂದ ನಾನೂ ಒದ್ದಾಡಿದ್ದೇನೆ. ಅವೆಲ್ಲವನ್ನು ಜತನದಿಂದ ಕಾಯ್ದುಕೊಂಡು ಬೆಳೆಸಿದ್ದರೆ ಏನಿಲ್ಲವೆಂದರೂ ಈಗ ಹತ್ತಾರು ಪುಸ್ತಕಗಳಾಗುತ್ತಿದ್ದವು.

ಒಂದು ಪುಸ್ತಕವಾಗಬೇಕಿದ್ದ ಬರಹದ ಒಂದು ಆಲೋಚನೆಯನ್ನು ನಾನು ಭ್ರೂಣವೆಂದೆನಲ್ಲ... ನೀವೆನ್ನಬಹುದು – ಪುಸ್ತಕದ ಆಲೋಚನೆ ಅದ್ಹೇಗೆ ಭ್ರೂಣವಾಗುತ್ತದೆ?... ಎಂದು. ನಮ್ಮ ಹಿರಿಯ ಸಾಹಿತಿ ಸತ್ಯಕಾಮ ಅವರು ಹೇಳುತ್ತಿದ್ದರಂತೆ, 'ಪುಸ್ತಕ ಅಂದರೆ ಅದು ನಿರ್ಜೀವ ವಸ್ತು ಅಲ್ರಪ್ಪಾ, ಅದೊಂದು ಉಸುರಿದ್ದ ಒಡಲು' ಅಂತ. ಪುಸ್ತಕ ಒಂದು ಉಸುರಿದ್ದ ಒಡಲು ಅಂತ ನೀವೂ ಕೂಡಾ ಒಪ್ಪುತ್ತೀರಿ ಅಲ್ಲವೇ... ಅಂದಮೇಲೆ ಪುಸ್ತಕವಾಗಬೇಕಿದ್ದ ಒಂದು ಯೋಚನೆಯ ಬೀಜ ಭ್ರೂಣವಾಗುತ್ತದೆಯಲ್ಲವೆ!! 'ಭ್ರೂಣಹತ್ಯೆ ಮಹಾಪಾಪ' ಅಂತಾರಲ್ಲ ಹಾಗೆಯೇ ಈ ಲೇಖಕನೊಳಗಿನ ಭ್ರೂಣ ಹತ್ಯೆಯಾಗುವುದಿದೆಯಲ್ಲ... ಇದು ಕೂಡ ಪಾಪದಾದಯಕವಾದ ಕೆಲಸವೇ. ಇದರ ಹಪಹಪಿ, ಸಂಕಟ ಏನೆಂದು ಸ್ವತಃ ಲೇಖಕನಾದವನಿಗೆ ಮಾತ್ರ ಗೊತ್ತು.

ಇತ್ತೀಚೆಗೆ ನನಗೆ ಬರೆಯೋಣ ಅಂತ ಕೂತರೆ ಹೊಸದಾಗಿ ಏನೂ ತೋಚುತ್ತಿಲ್ಲ. ಅಯ್ಯಯ್ಯೋ ನನ್ನ ಸೃಜನಶೀಲತೆಯ ಚಿಲುಮೆ ಬತ್ತಿ ಹೋಯಿತೇನು ಅಂತ ಸಿಕ್ಕಾಪಟ್ಟೆ ಗಾಬರಿಗೊಳಗಾದೆ. ಒಬ್ಬ ಗೈನೊಕಾಲಜಿಸ್ಟ್ ಹೆಣ್ಣುಮಗಳೊಬ್ಬಳನ್ನು ಪರೀಕ್ಷಿಸಿ ಅವಳಿಗೆ ಸಂತಾನೋತ್ಪತ್ತಿ ಸಾಮರ್ಥ್ಯ ಇಲ್ಲವೆಂದಾಗ ಆ ಹೆಣ್ಣುಮಗಳಿಗೆ ಆಗುವ ಆಘಾತದ ಪರಿಯಲ್ಲಿಯೇ ಲೇಖಕನಾದವನಿಗೆ ತನ್ನ ಸೃಜನಶೀಲ ಸಾಮರ್ಥ್ಯ ನಿಂತಿದೆ ಅನ್ನಿಸಿದಾಗ ಅವನಿಗೂ ಅದೇ ಪರಿಯ ಆಘಾತವಾಗುತ್ತದೆ. ಮೊನ್ನೆ ಗೆಳೆಯ ಮಲ್ಲೇಶ್ ಫೋನ್ ಮಾಡಿ ಕುಶಲೋಪರಿ ಎಲ್ಲ ಆದಮೇಲೆ, 'ಹೊಸದಾಗಿ ಏನು ಬರೀತಾ ಇದ್ದೀ...' ಅಂತ ಕೇಳಿದಾಗ ನನಗೆ ಬಹಳ ಸಂಕಟವಾಗಿ, 'ಏನೂ ಇಲ್ಲ ಮಾರಾಯ ಒಂದಕ್ಷರ ಕೂಡ ಹೊಳೆಯಲೊಲ್ಲದು, ಅಂತಾ ಹೀನ ಸ್ಥಿತಿಗೆ ತಲುಪಿ ಬಿಟ್ಟೀನಿ' ಅಂದೆ. ಅದಕ್ಕವನು, 'ಗಾಬರಿಯಾಗಬೇಡ. ಒಮ್ಮೊಮ್ಮೆ ಹಿಂಗಾಗುತ್ತ... ಎಲ್ಲಾ Struck ಆದ್ಹಂಗ ಆಗಿಬಿಡುತ್ತ. ಮೊನ್ನೆ ನನಗೂ ಹಿಂಗೆ ಆಗಿತ್ತು. ಯಾವುದೇ ಕಾರಣಕ್ಕೂ ಓದೋದು ನಿಲ್ಲಿಸಬೇಡ, ಬೇಗ ರಿಕವರಿ ಆಗಿ ಒಂದೊಳ್ಳೆ ಕೃತಿಯನ್ನು ನೀನು ನಮಗೆ ಕೊಡುತ್ತಿ... ನೋಡ್ತಾ ಇರು' ಅಂತ ಸಲಹೆ ರೂಪದ ಆಶೀರ್ವಾದ ಮಾಡಿದ. ಅವನಿಗೂ ಹೀಗೆ ಆಗಿತ್ತು ಅಂದದ್ದು ಕೇಳಿ, ನನಗೊಬ್ಬನಿಗೆ ಅಲ್ಲ ಹೀಂಗ್ ಆಗ್ತಿರೋದು ಬೇರೆಯವರಿಗೂ ಆಗ್ತಿದೆ ಅಂತ ಕೇಳಿ ಸಮಾಧಾನವಾಯ್ತು. ಸ್ವಲ್ಪ ಧೈರ್ಯವೂ ಬಂತು.

ಲೇಖಕ ತನ್ನ ಭ್ರೂಣಗಳನ್ನು ಹೇಗೆ ಕಾಪಾಡಿಕೊಳ್ಳಬೇಕೆಂದು ನಾನು ಬರವಣಿಗೆ ಆರಂಭಿಸಿದ ಕಾಲದಲ್ಲಿ ನನಗೆ ಆತ್ಮೀಯರಾಗಿದ್ದ ಹಿರಿಯ ಲೇಖಕರೊಬ್ಬರು ಹೇಳಿದ್ದರು. ಬರವಣಿಗೆಯ ಹೊಸ ಹೊಳಹು ಹೊಳೆದಾಗ ಅದನ್ನು ತಕ್ಷಣ Note ಮಾಡಿಟ್ಟುಕೊಳ್ಳಬೇಕು, ಮುಂದೆ ವಿರಾಮವಾಗಿದ್ದಾಗ ಅದನ್ನು ಮೊಳೆಯಿಸಿ, ಚಿಗುರಿಸಿ, ರಕ್ತಮಾಂಸಗಳನ್ನು ತುಂಬಿ ಬೆಳೆಯಿಸಬೇಕು ಅಂತ. ಇದು ಸರಿಯಾದ